ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಜನಾಂಗದ ಕಲ್ಯಾಣ ಕಾರ್ಯಕ್ರಮ

೧೩೧೯. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫-೮೬ ೧೯೮೬-೮೭ನೇ ಡಿಸೆಂಬರ್ ಅಖೈರ್‌ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಜನಾಂಗದ ಕಲ್ಯಾಣ ಕಾರ್ಯಗಳಿಗಾಗಿ ಸರ್ಕಾರವು ವಿನಿಯೋಗಿಸಿದ ಹಣವೆಷ್ಟು? (ವರ್ಷವಾರು ವಿವರ ನೀಡುವುದು).

ಆ) ಯೋಜನಾ ಹಾಗೂ ಯೋಜನೇತರಡಿಯಲ್ಲಿ ಮಾಡಿದ ಕೆಲಸಗಳೆಷ್ಟು ? ಅವುಗಳು ಯಾವುವು (ವಿವರ ನೀಡುವುದು)

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ)

ವರ್ಷ	ವಿನಿಯೋಗಿಸಿದ ಮೊತ್ತ (ರೂ.ಲಕ್ಷಗಳಲ್ಲಿ)
೧೯೮೫-೮೬	೨೩೯.೪೪
೧೯೮೬-೮೭	೨೮೨.೩೯

(ಡಿಸೆಂಬರ್ ೧೯೮೬ ಅಂತ್ಯದವರೆಗೆ)

ಆ) ಯೋಜನೆ ಮತ್ತು ಯೋಜನೇತರಡಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯು ಪ್ರಮುಖವಾಗಿ ಅನುಷ್ಠಾನಗೊಳಿಸಿದ ಶೈಕ್ಷಣಿಕ ಕಾರ್ಯಕ್ರಮಗಳು.

೧)	ಪೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು	...	೩೪
೨)	ಆಶ್ರಮ: ವಸತಿ ಶಾಲೆಗಳು	...	೧೬
೩)	ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು	...	೪೮
೪)	ಹೊಲಿಗೆ ತರಬೇತಿ ಕೇಂದ್ರಗಳು	...	೨
೫)	ಹೊಲಿಗೆ ಉತ್ಪಾದನಾ ಘಟಕ	...	೧
೬)	ತೆಂಗಿನ ನಾರಿನ ಉತ್ಪನ್ನಗಳ ಘಟಕ	..	೧

ಅಲ್ಲದೆ, ಇಲಾಖೆಯು ವಿವಿಧ ವಿದ್ಯಾರ್ಥಿ ವೇತನಗಳು ಮತ್ತು ಪ್ರೋತ್ಸಾಹಕ ಯೋಜನೆಗಳನ್ನು ಜಾರಿಗೊಳಿಸುತ್ತಿದ್ದು ವಿವರ ಕೆಳಕಂಡಂತಿದೆ.—

	ಯೋಜನೆ	ಪ್ರಯೋಜನ ಪಡೆದವರ ಸಂಖ್ಯೆ
೧.	ಪೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ	೧೨,೫೬೭
೨.	ಪೆಟ್ರಿಕ್ ನಂತರದ ವಿದ್ಯಾರ್ಥಿ ವೇತನ	೧,೪೪೬
೩.	ಆರ್ಹತಾ ವಿದ್ಯಾರ್ಥಿ ವೇತನ	೬೪೯
೪.	ಅನೈರ್ಮಲ್ಯ ವೃತ್ತಿಯಲ್ಲಿರುವವರ ಮಕ್ಕಳಿಗೆ ವಿದ್ಯಾರ್ಥಿ ವೇತನ	೭
೫.	ಎಸ್.ಎಸ್.ಎಲ್.ಸಿ. ಪ್ರಥಮ ದರ್ಜೆ ವಿದ್ಯಾರ್ಥಿಗಳಿಗೆ ಬಹುಮಾನ	೩೫
೬.	ಕಾಲೇಜು ವಿದ್ಯಾರ್ಥಿಗಳಿಗೆ ಬಹುಮಾನ	೨೨
೭.	ಆರ್ಥಿಕ ಸೌಲಭ್ಯಗಳು	೧೦೦
೮.	ಅಂತರ ಜಾತಿ ವಿವಾಹಿತ ದಂಪತಿಗಳಿಗೆ ಬಹುಮಾನ	೧೫

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಲ್ಲಿ ಪ್ರಯೋಜನ ಪಡೆದ ಕುಟುಂಬಗಳ ವಿವರ ಕೆಳಕಂಡಂತಿದೆ.

ವರ್ಷ	ವಿಶೇಷ ಘಟಕ ಯೋಜನೆ	ಗಿರಿಜನ ಉಪ ಯೋಜನೆ
೧೯೮೫-೮೬	೫೭೫೩	೪೯೪
೧೯೮೬-೮೭	೩೬೫೮	೩೨೫೦

ರಾಜ್ಯದಲ್ಲಿ ಬೀಡಿ ಕಾರ್ಮಿಕರ ಕನಿಷ್ಠ ವೇತನ

೧೪೭೭. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಬೀಡಿ ಕಾರ್ಮಿಕರ ಸಂಖ್ಯೆ (ಜಿಲ್ಲಾವಾರು ಸಂಖ್ಯೆ ಒದಗಿಸುವುದು).

ಆ) ೧೯೮೫-೮೬ ರಿಂದ ಇದುವರೆವಿಗೂ ನೀಡಿರುವ ಕನಿಷ್ಠ ವೇತನ ಎಷ್ಟು ?

ಇ) ಬಳಕೆದಾರರ ಬೆಲೆ ಸೂಚ್ಯಾಂಕ ಹೆಚ್ಚಾಗಿರುವುದರಿಂದ ಬೀಡಿ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಪರಿಷ್ಕರಿಸುವ ಸೂಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಸಚಿವರು).—

ಅ) ಲಭ್ಯವಿರುವ ದಾಖಲಾತಿಯ ಆಧಾರದ ಪ್ರಕಾರ ನಮ್ಮ ರಾಜ್ಯದಲ್ಲಿ ಸುಮಾರು ೩,೫೫,೨೪೪ ಬೀಡಿ ಕಾರ್ಮಿಕರಿರುತ್ತಾರೆ. ಜಿಲ್ಲಾವಾರು ಅಂಕಿ ಅಂಶ ತೋರಿಸುವ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

ಆ) ೧೯೮೫-೮೬ನೇ ಸಾಲಿನಲ್ಲಿ ಒಂದು ಸಾವಿರ ಬೀಡಿ ಸುತ್ತಲು ಕನಿಷ್ಠ ವೇತನ ರೂ. ೭-೪೦ ಜುಲೈ ೧೯೮೬ನೇ ಸಾಲಿನಲ್ಲಿ ಕನಿಷ್ಠ ವೇತನವನ್ನು ರೂ. ೭-೪೦ ರಿಂದ ರೂ. ೧೧-೫೦ಕ್ಕೆ (ಸಾವಿರ ಬೀಡಿ ಸುತ್ತಲು) ಏರಿಸಿ ಪರಿಷ್ಕರಣೆ ಮಾಡಲಾಯಿತು. ಹೆಚ್ಚುವರಿಯಾಗುವ ಗ್ರಾಹಕ ಬೆಲೆ ಸೂಚ್ಯಾಂಕ ಗಳನ್ನು ಗಮನದಲ್ಲಿಟ್ಟುಕೊಳ್ಳುವುದಕ್ಕೆ ಜೀವನ ನಿರ್ವಹಣಾ ಭತ್ಯೆಯನ್ನು ಅಳವಡಿಸಲಾಗಿದೆ. ಇಂದು ಒಂದು ಸಾವಿರ ಬೀಡಿ ಸುತ್ತುವ ಕಾರ್ಮಿಕರು ಈ ಕೆಳಕಂಡಂತೆ ಕನಿಷ್ಠ ವೇತನವನ್ನು ಪಡೆಯುತ್ತಿದ್ದಾರೆ.

ಮೂಲ ವೇತನ	ರೂ ೧೧-೫೦
ತುಟ್ಟಿಭತ್ಯೆ	ರೂ. ೨-೦೪
ಒಟ್ಟು	ರೂ. ೧೩-೫೪

ಇ) ಹೌದು.